ದಿನಾಂಕಃ 16-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ.

ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ

ಲೋಕಾಯುಕ್ತ ಪೊಲೀಸರು ಲೋಕಾಯುಕ್ತ ಕಛೇರಿಗೆ ಬರುವಂತೆ ನನಗೆ ಲಿಖಿತವಾಗಿ 22-11-2012 ರಂದು ನೋಟೀಸ್ ಕೊಟ್ಟಿದ್ದರು. ಸದರಿ ನೋಟೀಸನ್ನು ನಾನು ನಮ್ಮ ಹಿರಿಯ ಅಧಿಕಾರಿಗಳಿಗೆ ಕೊಟ್ಟು ಲೋಕಾಯುಕ್ತ ಕಛೇರಿಗೆ ಹೋಗಲು ಅನುಮತಿಯನ್ನು ಪಡೆದಿದ್ದೆ. ನನಗೆ ಲೋಕಾಯುಕ್ತ ಕಛೇರಿಗೆ ಹೋಗಲು ಅನುಮತಿಯನ್ನು ಮೌಖಿಕವಾಗಿ ಕೊಟ್ಟಿದ್ದರು, ಲಿಖಿತವಾಗಿ ಕೊಟ್ಟಿಲ್ಲ. ನಮ್ಮ ಕಛೇರಿಯಲ್ಲಿ ಮೂವ್‌ಮೆಂಟ್ ರಿಜಿಸ್ಟರ್ ಇಟ್ಟಿರುತ್ತೇವೆ. ಆ ದಿನ ನಾನು ಕಛೇರಿಯನ್ನು ಎಷ್ಟು ಸಮಯಕ್ಕೆ ಬಿಟ್ಟಿದ್ದೇನೆ ಎನ್ನುವುದನ್ನು ಮತ್ತು ಉದ್ದೇಶವನ್ನು ಮೂವ್‌ಮೆಂಟ್ ರಿಜಿಸ್ಟರ್-ನಲ್ಲಿ ಬರೆದಿರುತ್ತೇನೆ.

ಆರೋಪಿಯ ಮನೆಯಲ್ಲಿ ಯಾವ ಯಾವ ದಾಖಲೆಗಳನ್ನು ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಸದರಿ ದಾಖಲೆಗಳನ್ನು ನಾನು ನೋಡಿರುತ್ತೇನೆ. ಒಂದು ಗಿರವಿ ರಸೀದಿ, ಬ್ಯಾಂಕ್ ಪಾಸ್ ಪುಸ್ತಕ, ಎಲ್‌ಐಸಿ ಬಾಂಡ್-ಗಳು, ಪೀಠೋಪಕರಣ ಖರೀದಿ ಮಾಡಿದ ಬಿಲ್‌ಗಳು ಇತರೆ ದಾಖಲೆಗಳನ್ನು ತೆಗೆದುಕೊಂಡಿದ್ದಾರೆ. ಆ ದಿನ ಲೋಕಾಯುಕ್ತ ಪೊಲೀಸರು ಸರ್ಚ್ ವಾರೆಂಟ್ ತಂದಿದ್ದರು, ನಾನು ಅದನ್ನು ನೋಡಿರುತ್ತೇನೆ ಮತ್ತು ಅದರ ಮೇಲೆ ರುಜು ಮಾಡಿರುತ್ತೇನೆ. ದಾಖಲೆಗಳನ್ನು ಲೋಕಾಯುಕ್ತ ಪೊಲೀಸರು ಆ ಮನೆಯಿಂದ ತೆಗೆದುಕೊಂಡಿರುತ್ತಾರೆ, ಮಾಲೀಕರು ಕೊಟ್ಟಿರುವುದಿಲ್ಲ. ಮಹಜರ್ ಬರೆದಾಗ ಸಂಜೆ ಸುಮಾರು 06-30 ಆಗಿತ್ತು. ದಾಳಿಯನ್ನು ಬೆಳಗ್ಗೆ 06-00 ಘಂಟೆಯಿಂದ ಮಧ್ಯಾಹ್ನ 12-00 ಘಂಟೆವರೆಗೂ ಮಾಡಿರುತ್ತಾರೆ. ನಾವು ಮನೆಯನ್ನು ಮಧ್ಯಾಹ್ನ 12-00 ಘಂಟೆಗೆ ಬಿಟ್ಟಿರುತ್ತೇವೆ. ನಾವು ಆ ದಿನ ಬೆಂಗಳೂರಿನ ಆರ್.ಟಿ ನಗರದಲ್ಲಿನ 1 ನೇ ಆರೋಪಿಯ ಮನೆಗೆ ಹೋಗಿಲ್ಲ ಎನ್ನುವುದು, ಅಲ್ಲಿ ಯಾವುದೇ ಶೋಧನೆ ಮಾಡಿಲ್ಲ ಎನ್ನುವುದು

ಸರಿಯಲ್ಲ. 1 ನೇ ಆರೋಪಿಯ ಮನೆಯಲ್ಲಿ ಯಾವುದೇ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ.

1 ನೇ ಆರೋಪಿಗೆ ಮಾಡಿದ ಪಾಟೀ ಸವಾಲನ್ನು ಉಳಿದ ಆರೋಪಿಗಳ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಸಹಿ/-

(ಎಂ.ಎಲ್.ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ**

**Spl. C(Courrption) 9/2014**

**ಪ್ರಾಸಾ ಃ 2 ಚಾಸಾ ಃ 4**

**ದಿನಾಂಕಃ 16-02-2021**

ಹೆಸರು ಃ- ವಿಜಯಲಕ್ಷ್ಮೀ ವಿ
ಗಂಡನ ಹೆಸರು ಃ- ಕೆ ಎನ್ ವೇಣುಗೋಪಾಲ್
ವಯಸ್ಸು ಃ- 38 ವರ್ಷ
ಉದ್ಯೋಗ ಃ- ಕ್ಷೇತ್ರ ಪಾಲಕರು, ಮೀನುಗಾರಿಕೆ ಇಲಾಖೆ, ಕೋಲಾರ
ವಾಸಸ್ಥಳ ಃ- ಕೋಲಾರ

**(ಪ್ರಮಾಣವಚನ ಮಾಡಿಸಲಾಗಿದೆ)**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

22-11-2012 ರಂದು ಲೋಕಾಯುಕ್ತ ಕಛೇರಿಯಿಂದ ನಮ್ಮ ಇಲಾಖೆಗೆ ಒಂದು ಮನವಿ ಪತ್ರ ಬಂದಿದ್ದು ಯಾರಾದರೂ ಕಛೇರಿಯ ಸಿಬ್ಬಂದಿಯನ್ನು ಲೋಕಾಯುಕ್ತ ಕಛೇರಿಗೆ ಕಳುಹಿಸಿಕೊಡುವಂತೆ ಮನವಿ ಮಾಡಿದ್ದರು. ಅದರಂತೆ ನನ್ನ ಇಲಾಖೆಯ ಮುಖ್ಯಸ್ಥರು ನನ್ನನ್ನು ಲೋಕಾಯುಕ್ತ ಕಛೇರಿಗೆ ಹೋಗಲು ಅನುಮತಿಯನ್ನು ಕೊಟ್ಟಿದ್ದು 23-11-2012 ರಂದು ಬೆಳಗ್ಗೆ 05-00 ಘಂಟೆಗೆ ಲೋಕಾಯುಕ್ತ ಕಛೇರಿಗೆ ಹೋಗಿರುತ್ತೇನೆ. ಅಲ್ಲಿ ಚಾಸಾ-5 ರವರು ಕೂಡ ಹಾಜರಿದ್ದು ನಮ್ಮನ್ನು ಲೋಕಾಯುಕ್ತ ಪೊಲೀಸರು 2 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಇವರ ಮನೆ ಕೋಲಾರಮ್ಮನ ದೇವಸ್ಥಾನದ ಬಳಿ ಇತ್ತು. ಲೋಕಾಯುಕ್ತ ಪೊಲೀಸರ ಬಳಿ ಶೋಧನಾ ವಾರೆಂಟ್ ಇತ್ತು. ಅದರಂತೆ 2 ನೇ ಆರೋಪಿಯ ಮನೆಯನ್ನು ಶೋಧನೆ ಮಾಡಿರುತ್ತಾರೆ. ಶೋಧನಾ ವಾರೆಂಟ್‌ನ್ನು ನಾನು ನೋಡಿದ್ದು, ರುಜು ಮಾಡಿರುತ್ತೇನೆ, ವಾರೆಂಟನ್ನು ನಿಪಿ-17 ಎಂದು, ಸಾಕ್ಷಿ ರುಜುವನ್ನು ನಿಪಿ-17(ಎ) ಎಂದು ಗುರುತಿಸಿದೆ.

ಮನೆಯ ಒಳಗಡೆ ಹೋಗಿ ನೋಡಲಾಗಿ ಮನೆಯ ಹಾಲ್-ನಲ್ಲಿ ಒಂದು ಬ್ಯಾಗ್ ಇತ್ತು, ಬ್ಯಾಗನ್ನು ಪರಿಶೀಲಿಸಿದಾಗ ಕೆಲವು ದಾಖಲೆಗಳು ಇದ್ದವು. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ 24 ದಾಖಲೆಗಳು ಇದ್ದವು. ಸದರಿ ದಾಖಲೆಗಳ ಮೇಲೆ ಪೊಲೀಸರು ನನ್ನ ರುಜುವನ್ನು ಪಡೆದಿದ್ದಾರೆ,

ಈ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ಮೂಲ ದಾಖಲೆಗಳನ್ನು 2 ನೇ ಆರೋಪಿಗೆ ಹಿಂತಿರುಗಿಸಿದ್ದು, ಇವುಗಳ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡಿರುತ್ತಾರೆ, ಇವುಗಳ ಮೇಲೆ ನಾನು ರುಜು ಮಾಡಿರುತ್ತೇನೆ, ಈ 24 ದಾಖಲೆಗಳನ್ನು ನಿಪಿ-18 ಎಂದು ಗುರುತಿಸಿದೆ. 1 ರಿಂದ 24 ರ ದಾಖಲೆಗಳನ್ನು ನಿಪಿ-18(1) ರಿಂದ ನಿಪಿ-18(24) ಎಂದು ಗುರುತಿಸಿದೆ, ಸಾಕ್ಷಿ ರುಜುಗಳನ್ನು ನಿಪಿ-18(1-ಎ) ರಿಂದ ನಿಪಿ-18(24-ಎ) ಎಂದು ಗುರುತಿಸಿದೆ.

ಮನೆಯ ಕೊಠಡಿಯಲ್ಲಿ ಒಂದು ಅಲಮೇರಾ ಇದ್ದು ಅದರಲ್ಲಿ ಇನ್ನೂ 6 ದಾಖಲೆಗಳು ಇದ್ದವು, ಇವುಗಳ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡಿರುತ್ತಾರೆ, ಇವುಗಳ ಮೇಲೆ ನಾನು ರುಜು ಮಾಡಿರುತ್ತೇನೆ, ಈ 6 ದಾಖಲೆಗಳನ್ನು ನಿಪಿ-19 ಎಂದು ಗುರುತಿಸಿದೆ. 1 ರಿಂದ 6 ರ ದಾಖಲೆಗಳನ್ನು ನಿಪಿ-19(1) ರಿಂದ ನಿಪಿ-19(6) ಎಂದು ಗುರುತಿಸಿದೆ, ಸಾಕ್ಷಿ ರುಜುಗಳನ್ನು ನಿಪಿ-19(1-ಎ) ರಿಂದ ನಿಪಿ-19(6-ಎ) ಎಂದು ಗುರುತಿಸಿದೆ. ಈ 6 ದಾಖಲೆಗಳು ದಿನಕೂಲಿ ನೌಕರರಿಗೆ ಸಂಬಂಧಿಸಿದ ದಾಖಲೆಗಳಾಗಿದ್ದವು. ಸ್ಥಳದಲ್ಲಿ ಪೊಲೀಸರು ಮಹಜರ್ ಬರೆದಿದ್ದು, ರುಜು ಮಾಡಿದ್ದೇನೆ, ಮಹಜರನ್ನು ನಿಪಿ-20 ಎಂದು, ಸಾಕ್ಷಿ ರುಜುವನ್ನು ನಿಪಿ-20(ಎ) ಎಂದು ಗುರುತಿಸಿದೆ. ಅದಕ್ಕೆ ಚಾಸಾ-5 ಕೂಡ ರುಜು ಮಾಡಿದ್ದಾರೆ. ಮಹಜರನ್ನು ಬೆಳಗ್ಗೆ 06-00 ಘಂಟೆಯಿಂದ ಮಧ್ಯಾಹ್ನ 12-15 ಘಂಟೆವರೆಗೆ ಬರೆದಿದ್ದಾರೆ. ಮಹಜರಿಗೆ 2 ನೇ ಆರೋಪಿಯ ರುಜುವನ್ನು ಕೂಡ ಪಡೆದಿರುತ್ತಾರೆ, ರುಜುವನ್ನು ನಿಪಿ-20(ಬಿ) ಎಂದು ಗುರುತಿಸಿದೆ.

(ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಸಹಿ/-

(ಎಂ.ಎಲ್.ರಘುನಾಥ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.**